ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ತಾರತಮ್ಯ ಮಾಡಿರುವುದು

569 (893) ಶ್ರೀ ರಮಾನಾಥ್ ರೈ. ಬಿ. (ಬಂಟ್ವಾಳ):– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ಆಹಾರ ವೆಚ್ಚಕ್ಕಾಗಿ ಮಾಸಿಕ ರೂ. 500 ಹಾಗೂ ಲೇಖನ ಸಾಮಗ್ರಿಗಳಿಗೆ ರೂ. 40 ನೀಡಲಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದೇ ಇಲಾಖೆ ನಡೆಸಲ್ಪಡುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಇದೇ ಉದ್ದೇಶಕ್ಕೆ ಮಾಸಿಕ ರೂಪಾಯಿ 650 ಹಾಗೂ 250 ರೂ.ಗಳು ನೀಡಲಾಗುತ್ತಿದ್ದು ಆಶ್ರಮ ಶಾಲೆಗಳಿಗೆ ಈ ತಾರತಮ್ಯ ಮಾಡುವುದು ಸರ್ಕಾರ ಗಮನಿಸಿದೆಯೇ;

ಇ) ಹಾಗಿದ್ದಲ್ಲಿ, ಈ ರೀತಿ ತಾರತಮ್ಯ ಮಾಡಲು ಕಾರಣಗಳೇನು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು):–

ಅ) ಹೌದು

ಆ) ಮತ್ತು ಇ) ಆಶ್ರಮ ಶಾಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆ ವಿದ್ಯಾಭ್ಯಾಸ ನೀಡುತ್ತಿದ್ದು ಈ ವಿದ್ಯಾರ್ಥಿಗಳ 5 ರಿಂದ 10 ವರ್ಷದ ವಯೋಮಿತಿಯ ಒಳಗಡೆ ಇರುತ್ತಾರೆ. ಇವರುಗಳ ಆಹಾರ ವೆಚ್ಚಕ್ಕೆ ಪ್ರತಿ ವಿದ್ಯಾರ್ಥಿಗೆ ನಿಗಧಿಪಡಿಸಿರುವ ಮಾಸಿಕ ವೆಚ್ಚ ರೂ. 500/– ಸಾಕಾಗುತ್ತದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳು ಇದ್ದು ಇವರ ವಯೋಮಿತಿ ಸಾಮಾನ್ಯವಾಗಿ 10 ರಿಂದ 16 ವರ್ಷಗಳ ಒಳಗೆ ಇರುತ್ತದೆ. ಆದ್ದರಿಂದ ಈ ವಿದ್ಯಾರ್ಥಿಗಳು ವಯೋಮಿತಿಯಲ್ಲಿ ದೊಡ್ಡವರಾಗಿರುವುದರಿಂದ ಇವರುಗಳ ಆಹಾರ ವೆಚ್ಚವನ್ನು ವಸತಿ ಶಾಲೆ ವಿದ್ಯಾರ್ಥಿಗಳಿಗೆ ನೀಡುವ ಭೋಜನ ದರಗಳಿಗಿಂತ ಹೆಚ್ಚಾಗಿ ನೀಡಲಾಗುತ್ತಿದೆ. ಆಶ್ರಮ ಶಾಲಾ ವಿದ್ಯಾರ್ಥಿಗಳು ಲೇಖನ ಸಾಮಗ್ರಿಗಳಿಗಾಗಿ ವಾರ್ಷಿಕೆ ರೂ. 40 ನೀಡಲಾಗುತ್ತಿದ್ದು ಇದನ್ನು ಹೆಚ್ಚಿಸುವುದಕ್ಕೆ ಪರಿಶೀಲಿಸಲಾಗುವುದು.

ಕಾರ್ಮಿಕ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ

570 (896) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು):– ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಾರ್ಮಿಕ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರುಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಇವರ ಸೇವಾ ಭದ್ರತೆ ಬಗ್ಗೆ ಸರ್ಕಾರದಿಂದ ಭದ್ರತೆ (ಗ್ಯಾರಂಟಿ) ಇದೆಯೇ;

ಇ) ಯಾವ ಮಾನದಂಡದ ಮೇಲೆ ಗುತ್ತಿಗೆ ನೌಕರರುಗಳನ್ನು ನೇಮಕ ಮಾಡಿಕೊಳ್ಳಲಾಗುವುದು;